ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951 ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
# KARNATAKA STATE FINANCIAL CORPORATION
Established under the State Financial Corporations Act. 1951

ISO 9001:2000

ಸಂಖ್ಯೆ : ಕೆ.ಎಸ್.ಎಫ್.ಸಿ/ಪ್ರ.ಕ./
Ref. No. KSFC/H.O./ MD/ ED(F)/927/2009-10

ದಿನಾಂಕ
Date : 30-09-09

## CIRCULAR No. 877

Sub : Modifications to Special One Time Settlement Scheme of Government of Karnataka

Ref : 1) Circular No.793 dated 10.07.2007.
2) ಸರ್ಕಾರಿ ಆದೇಶ ಸಂಖ್ಯೆ ಆಇ 56 ಬಿಎಫ್‌ಸಿ, ಬೆಂಗಳೂರು, ದಿನಾಂಕ 26.09.2009.

-:o:0:o:-

With reference to the above, please find herewith enclosed above referred GO dated 26.09.2009 on the captioned subject (Anneuxre-I) which is self explanatory. The Government has modified the existing special OTS Scheme issued vide GO No. ಆಇ 82 ಬಿಎಫ್‌ಸಿ, 2006 ಬೆಂಗಳೂರು, ದಿನಾಂಕ 22.06.2007. The salient features / working guidelines of the modified scheme are as under:

a) The existing settlement formula which was applicable for the loans upto Rs.2.00 lakhs has now been extended to the loans upto Rs.5.00 lakhs.

b) In respect of loans more than Rs.5.00 lakhs and upto Rs.10.00 lakhs, the settlement formula has been linked to the value of secured assets i.e., primary and collateral on SR value basis. The revised settlement formula for these loans is minimum 75% of the value of secured assets (SR value) **OR** present P+OD whichever is higher.

c) The modified GO is made applicable with effect from 26.09.2009 and the scheme is valid upto 31.12.2009. Under no circumstances the validity of the scheme shall be extended. The scheme shall come to a close automatically on 31.12.2009

d) This modified scheme is not applicable to the accounts where the promoters have paid the entire settlement amount as per the existing GO. However, if the promoters have not paid the entire settlement amount as per the existing formula, such accounts shall be covered under the modified scheme.

e) With the introduction of this modified scheme the earlier settlement formula issued vide Circular No. 793 dated 10.07.2007 ceases to exist.

...2

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು - 560 052.
ದೂರವಾಣಿ ಸಂಖ್ಯೆ ಸಾಮಾನ್ಯ : 22263322 ತಂತಿ : ಮೈಫಿನ್ ಕಾರ್ಪ್, ಫ್ಯಾಕ್ಸ್ : 22250126
HEAD OFFICE : KSFC Bhavan, No. 1/1, Thimmaiah Road, Near Cantonment Railway Station, Bangalore - 560 052.
Telephone : Gen : 22263322 Telegrams : MYFINCORP, Fax : 22250126, E-mail : enquiry@ksfc.net www.ksfc.kar.nic.in

666

f) The State Government is reimbursing the amount in the form of equity to the extent of OTS amount now being paid by the borrowers under the modified scheme.

g) Since the Government is reimbursing the amount in the form of equity, the eligible reimbursement of interest subsidy can not be credited to the borrower's account. After payment of the OTS amount by the borrowers as per the revised settlement formula, the write-off / waiver effect shall be given for the sacrificed amount. It may please be noted that there shall not be any write-off in respect of loans above Rs.5.00 lakh and upto Rs.10.00 lakh cases. In respect of loans upto Rs.5.00 lakhs the proposals which involves write-off shall be placed before the Managing Director for approval.

h) The OTS proposals under this modified scheme shall be processed as per the revised format enclosed (Annexure-II) to this circular.

i) The data entry has to be made in "OTS DATA ENTRY FORM" available under Recovery Maintenance → Data Incorporation → OTS Details Incorporation Data Entry Form → GoK – Modified for each case covered under this modified scheme, as per the format given at Annexure-III.

All other terms and conditions mentioned in circular No.793 dated 10.07.2007 remains unaltered. All the BMs/ZMs are hereby instructed to inform the revised scheme to all the existing eligible units and ensure that maximum cases are settled under the scheme before 31.12.2009. This shall be brought to the notice of all the concerned in your office / department.

Karthik L
**MANAGING DIRECTOR** 30/9/09

All BMs
All ZMs / DGMs of Super 'A' Branches / IA cells
All Principal Officers / Section Heads in HO
All General Managers
Library

Executive Directors - for information

667

ANNEXURE-I

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆದ ಸಣ್ಣ ಮತ್ತು ಅತಿ ಸಣ್ಣ ಸಾಲಗಾರರಿಗೆ ಹಾಲಿ ಇರುವ ವಿಶೇಷ ಒಂದಾವರ್ತಿ ತೀರುವಳಿ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ:ಆಇ 82 ಬಿಎಫ್‌ಸಿ 2006 ದಿನಾಂಕ: 22-06-2007.

(2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಡಿಜಿಎಂ/ಹೆಚ್‌ಓ-65/09-10 ದಿನಾಂಕ: 27-07-2009.

<u>ಪ್ರಸ್ತಾವನೆ:</u>

ಮೇಲೆ (1) ರಲ್ಲಿ ಓದಲಾದ ದಿನಾಂಕ: 22-06-2007 ರ ಆದೇಶದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆದ ಸಣ್ಣ ಮತ್ತು ಅತಿ ಸಣ್ಣ ಸಾಲಗಾರರಿಗೆ ಕರ್ನಾಟಕ ಸರ್ಕಾರದ ವಿಶೇಷ ಒಂದಾವರ್ತಿ ತೀರುವಳಿ ಯೋಜನೆ ಅಡಿಯಲ್ಲಿ ಈ ಕೆಳಗಿನ ಷರತ್ತುಗಳೊಂದಿಗೆ ದಿನಾಂಕ: 01-04-2006 ರಂದು ಸಾಲದ ಖಾತೆಯು ಅನುತ್ಪಾದಕ ಆಸ್ತಿ (ಎನ್.ಪಿ.ಎ) ಎಂದು ವರ್ಗೀಕರಣಗೊಂಡಿರುವ 10.00 ಲಕ್ಷ ರೂ.ಗಳ ಅದಕ್ಕೂ ಕಡಿಮೆ ವಿತರಿಸಲಾಗಿರುವ ಸಾಲದ ಮೇಲಿನ ಸರಳ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಆದೇಶವನ್ನು ಹೊರಡಿಸಲಾಗಿದೆ.

ಎ. ಅರ್ಹತೆ:

ದಿನಾಂಕ: 01-04-2006 ರಂದು ಸಾಲದ ಖಾತೆಯು ಅನುತ್ಪಾದಕ ಆಸ್ತಿ (ಎನ್.ಪಿ.ಎ) ಎಂದು ವರ್ಗೀಕರಣಗೊಂಡಿರುವ 10.00 ಲಕ್ಷ ರೂ.ಗಳು ಮತ್ತು ಅದಕ್ಕೂ ಕಡಿಮೆ ವಿತರಿಸಲಾಗಿರುವ ಸಾಲಗಳು ಈ ಯೋಜನೆಯಡಿ ಅರ್ಹವಾಗಿರುತ್ತವೆ.

ಬಿ. ನಿರ್ಧರಣಾ ಸೂತ್ರ:

ಅ). 2.00 ಲಕ್ಷ ರೂ.ಗಳು ಮತ್ತು ಅದಕ್ಕೂ ಕಡಿಮೆ ವಿತರಣೆಯಾದ ಸಾಲಗಳು:

ಸದರಿ ಯೋಜನೆಯಡಿ ಅರ್ಹವಿರುವ ಸಾಲದ ಖಾತೆಯಲ್ಲಿ ಈವರೆಗೆ ಮರುಪಾವತಿಸಿರುವ ಮೊತ್ತವನ್ನು ಅಸಲು ಮತ್ತು ಇತರೆ ವೆಚ್ಚದ ಲೆಕ್ಕಕ್ಕೆ ಸೇರಿಸಿಕೊಂಡು ಹೆಚ್ಚಿಗೆ ಹಣವಿದ್ದಲ್ಲಿ ಅದನ್ನು ಬಡ್ಡಿ ಬಾಕಿಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಇದಾದ ನಂತರ ಸಾಲದ ಖಾತೆಯಲ್ಲಿ ಅಸಲು ಮತ್ತು ಇತರೆ ವೆಚ್ಚದ ಬಾಬ್ತು ಬಾಕಿ ಇದ್ದಲ್ಲಿ ಅದನ್ನು ಸಾಲಗಾರರು/ಖಾತ್ರಿದಾರರು ಪಾವತಿಸತಕ್ಕದ್ದು. ರಾಜ್ಯ ಸರ್ಕಾರವು ಶೇಕಡ 100 ರವರೆಗಿನ ಬಡ್ಡಿ ಬಾಕಿಯನ್ನು ಸರಳ ಬಡ್ಡಿ ಆಧಾರದ ಮೇಲೆ ಓ.ಟಿ.ಎಸ್. ನಿರ್ಧಾರವಾಗುವ ದಿನಾಂಕದವರೆಗೆ ಭರಿಸುವುದು. ಬಾಕಿ ಉಳಿದ ಚಕ್ರಬಡ್ಡಿ ಹಾಗೂ ದಂಡಬಡ್ಡಿಯನ್ನು ಕೆ.ಎಸ್.ಎಫ್.ಸಿ. ಯು ಮನ್ನಾ ಮಾಡತಕ್ಕದ್ದು.

..2

ಆ) 2 ರಿಂದ 5 ಲಕ್ಷ ರೂ.ಗಳವರೆಗೆ ವಿತರಣೆಯಾದ ಸಾಲಗಳು:

ಸದರಿ ಯೋಜನೆಯಡಿ ಅರ್ಹವಿರುವ ಸಾಲದ ಖಾತೆಯಲ್ಲಿ ಈವರೆಗೆ ಮರುಪಾವತಿಸಿರುವ ಮೊತ್ತವನ್ನು ಅಸಲು ಮತ್ತು ಇತರೆ ವೆಚ್ಚದ ಲೆಕ್ಕಕ್ಕೆ ಸೇರಿಸಿಕೊಂಡು ಹೆಚ್ಚಿಗೆ ಹಣವಿದ್ದಲ್ಲಿ ಅದನ್ನು ಬಡ್ಡಿಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಇದಾದ ನಂತರ ಸಾಲದ ಖಾತೆಯಲ್ಲಿ ಅಸಲು ಹಾಗೂ ಇತರೆ ವೆಚ್ಚದ ಬಾಬ್ತು ಬಾಕಿ ಇದ್ದಲ್ಲಿ ಅದನ್ನು ಮತ್ತು ಕನಿಷ್ಟ ಶೇಕಡ 25 ರಷ್ಟು ಸರಳ ಬಡ್ಡಿಯ ಮೊತ್ತವನ್ನು ಓ.ಟಿ.ಎಸ್. ನಿರ್ಧಾರವಾಗುವ ದಿನಾಂಕದವರೆಗೆ ಸಾಲಗಾರರು/ಖಾತ್ರಿದಾರರು ಪಾವತಿಸತಕ್ಕದ್ದು. ರಾಜ್ಯ ಸರ್ಕಾರವು ಶೇಕಡ 75 ರವರೆಗಿನ ಸರಳಬಡ್ಡಿಯ ಮೊತ್ತವನ್ನು ಓ.ಟಿ.ಎಸ್. ನಿರ್ಧಾರವಾಗುವ ದಿನಾಂಕದವರೆಗೆ ಭರಿಸುವುದು. ಬಾಕಿ ಉಳಿದ ಚಕ್ರಬಡ್ಡಿ ಹಾಗೂ ದಂಡಬಡ್ಡಿಯನ್ನು ಕ.ರಾ.ಹ. ಸಂಸ್ಥೆಯು ಮನ್ನಾ ಮಾಡತಕ್ಕದ್ದು.

ಇ) 5 ರಿಂದ 10 ಲಕ್ಷ ರೂ.ಗಳವರೆಗೆ ವಿತರಣೆಯಾದ ಸಾಲಗಳು:

ಸದರಿ ಯೋಜನೆಯಡಿ ಅರ್ಹವಿರುವ ಸಾಲದ ಖಾತೆಯಲ್ಲಿ ಈವರೆಗೆ ಮರುಪಾವತಿಸಿರುವ ಮೊತ್ತವನ್ನು ಅಸಲು ಮತ್ತು ಇತರೆ ವೆಚ್ಚದ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಇದಾದ ನಂತರ ಸಾಲದ ಖಾತೆಯಲ್ಲಿ ಅಸಲು ಹಾಗೂ ಇತರೆ ವೆಚ್ಚದ ಬಾಬ್ತು ಬಾಕಿ ಇದ್ದಲ್ಲಿ ಅದನ್ನು ಮತ್ತು ಕನಿಷ್ಟ ಶೇಕಡ 50 ರಷ್ಟು ಸರಳಬಡ್ಡಿಯ ಮೊತ್ತವನ್ನು ಓ.ಟಿ.ಎಸ್. ನಿರ್ಧಾರವಾಗುವ ದಿನಾಂಕದವರೆಗೆ ಸಾಲಗಾರರು/ಖಾತ್ರಿದಾರರು ಪಾವತಿಸತಕ್ಕದ್ದು. ರಾಜ್ಯ ಸರ್ಕಾರವು ಶೇಕಡ 50 ರವರೆಗಿನ ಸರಳಬಡ್ಡಿಯ ಮೊತ್ತವನ್ನು ಓ.ಟಿ.ಎಸ್. ನಿರ್ಧಾರವಾಗುವ ದಿನಾಂಕದವರೆಗೆ ಭರಿಸುವುದು. ಬಾಕಿ ಉಳಿದ ಚಕ್ರಬಡ್ಡಿ ಹಾಗೂ ದಂಡಬಡ್ಡಿಯನ್ನು ಕ.ರಾ.ಹ. ಸಂಸ್ಥೆಯು ಮನ್ನಾ ಮಾಡತಕ್ಕದ್ದು.

ಮೇಲೆ (2) ರಲ್ಲಿ ಓದಲಾದ ಕ.ರಾ.ಹ.ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರದಲ್ಲಿ ತಮ್ಮ ಖಾತೆಗಳನ್ನು ಮುಕ್ತಾಯಗೊಳಿಸಲು ಅನುಕೂಲವಾಗುವಂತೆ ಈ ಯೋಜನೆಯನ್ನು ಮಾರ್ಪಾಡು ಮಾಡಲು ಮನವಿಗಳು ಬರುತ್ತಿರುವುದರಿಂದ ವಿಶೇಷ ಒಂದಾವರ್ತಿ ತೀರುವಳಿ ಯೋಜನೆಯನ್ನು ಸೂಕ್ತವಾಗಿ ಮಾರ್ಪಾಡು ಮಾಡಲು ಕೋರಿರುತ್ತಾರೆ. ಆದ್ದರಿಂದ ಈಗ ಹಾಲಿ ಇರುವ ವಿಶೇಷ ಒಂದಾವರ್ತಿ ಯೋಜನೆಯನ್ನು ಮಾರ್ಪಡಿಸಲು ಉದ್ದೇಶಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

<u>ಸರ್ಕಾರದ ಆದೇಶ ಸಂಖ್ಯೆ:ಆಇ 56 ಬಿಎಫ್‌ಸಿ 2009, ಬೆಂಗಳೂರು, ದಿನಾಂಕ:26-09-2009.</u>

1. ಅರ್ಹತೆ:

(1) ವಿತರಿಸಲಾದ ಸಾಲದ ಮೊತ್ತ ರೂ.10.00 ಲಕ್ಷಕ್ಕೆ ಮೀರಿರಬಾರದು.

(2) ದಿನಾಂಕ: 1-4-2006 ರಂದು ಸಾಲದ ಖಾತೆಯು ಅನುತ್ಪಾದಕ ಆಸ್ತಿಯಾಗಿರಬೇಕು.

---3

669

2. ನಿರ್ಧರಣಾ ಸೂತ್ರ:

ಅ) ರೂ.5.00 ಲಕ್ಷದವರೆಗಿನ ಸಾಲಗಳಿಗೆ ನಿರ್ಧರಣಾ ಸೂತ್ರವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ:

(i) ಸಾಲಗಾರರು ಅಸಲು ಮತ್ತು ಇತರೆ ವೆಚ್ಚವನ್ನು ಸಂಪೂರ್ಣವಾಗಿ ಪಾವತಿಸಿರತಕ್ಕದ್ದು.

(ii) ಸರ್ಕಾರಿ ಆದೇಶ ಸಂ.ಆಇ 82 ಬಿಎಫ್‌ಸಿ 2006, ದಿನಾಂಕ: 22.06.2007 ರಲ್ಲಿ ನಮೂದಿಸಿರುವಂತೆ ಈವರೆಗೆ ಮರುಪಾವತಿಸಿರುವ ಮೊತ್ತವನ್ನು ಅಸಲು ಮತ್ತು ಇತರೆ ವೆಚ್ಚಗಳ ಲೆಕ್ಕಕ್ಕೆ ಸೇರಿಸಿಕೊಂಡು ಹೆಚ್ಚಿಗೆ ಹಣವಿದ್ದಲ್ಲಿ ಅದನ್ನು ಬಡ್ಡಿ ಬಾಕಿಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಆ) ರೂ.5.00 ಲಕ್ಷಕ್ಕೆ ಮೇಲ್ಪಟ್ಟು ಹಾಗೂ ರೂ.10.00 ಲಕ್ಷದವರೆಗಿನ ಸಾಲಗಳಿಗೆ ನಿರ್ಧರಣಾ ಸೂತ್ರವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ:

(i) ಸಾಲಗಳಿಗೆ ನೀಡಲಾದ ಪ್ರಾಥಮಿಕ ಹಾಗೂ ಪೂರಕ ಭದ್ರತೆಗಳ ಮೌಲ್ಯವು, ಬಾಕಿ ಇರುವ ಅಸಲು ಹಾಗೂ ಇತರೆ ವೆಚ್ಚಗಳಿಗೆ ಸಮನಾಗಿ ಅಥವಾ ಜಾಸ್ತಿ ಇರುವ ಪ್ರಕರಣಗಳಲ್ಲಿ :-

ಶೇ.75% ರಷ್ಟು ಭದ್ರತೆಯ ಮೌಲ್ಯ ಅಥವಾ ಕನಿಷ್ಟ ಬಾಕಿ ಇರುವ ಅಸಲು ಮತ್ತು ಇತರೆ ವೆಚ್ಚ, ಇವುಗಳಲ್ಲಿ ಯಾವುದು ಹೆಚ್ಚಾಗಿರುತ್ತದೆಯೋ ಅದು ನಿರ್ಧರಣಾ ಸೂತ್ರವಾಗಿರುತ್ತದೆ.

(ii) ಪ್ರಾಥಮಿಕ ಹಾಗೂ ಪೂರಕ ಭದ್ರತೆಯ ಮೌಲ್ಯವು, ಬಾಕಿ ಇರುವ ಅಸಲು ಹಾಗೂ ಇತರೆ ವೆಚ್ಚಗಳಿಗಿಂತ ಕಡಿಮೆ ಇದ್ದ ಪ್ರಕರಣಗಳಲ್ಲಿ ಬಾಕಿ ಇರುವ ಅಸಲು ಮತ್ತು ಇತರೆ ವೆಚ್ಚಗಳ ಮೊತ್ತ ನಿರ್ಧರಣಾ ಸೂತ್ರವಾಗುತ್ತದೆ.

ಇ) ಈ ನಿರ್ಧರಣಾ ಸೂತ್ರದ ಪ್ರಕಾರ ನಿಗದಿಪಡಿಸಿರುವ ಮೊತ್ತವನ್ನು ಪಾವತಿಸಿದ ನಂತರ ಬಾಕಿ ಇರುವ ಬಡ್ಡಿ, ಚಕ್ರ ಬಡ್ಡಿ ಹಾಗೂ ದಂಡ ಬಡ್ಡಿಯನ್ನು ಕ.ರಾ.ಹ. ಸಂಸ್ಥೆಯು ಮನ್ನಾ ಮಾಡತಕ್ಕದ್ದು.

3. ವಿತರಿಸಲಾದ ಸಾಲ ರೂ.5.00 ಲಕ್ಷಕ್ಕಿಂತ ಹೆಚ್ಚಿಗೆ ಇರುವ ಪ್ರಕರಣಗಳಲ್ಲಿ ಪ್ರಾಥಮಿಕ ಹಾಗೂ ಪೂರಕ ಭದ್ರತೆಯ ಮೌಲ್ಯವನ್ನು ನೋಂದಣಾಧಿಕಾರಿಯವರ ನಿರ್ದೇಶಿತ ಬೆಲೆಯ ಮೇಲೆ ಆಧರಿಸಲಾಗುತ್ತದೆ.

4. ಈ ಯೋಜನೆಯು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ. ಆದೇಶ ಸಂಖ್ಯೆ.ಆಇ 82 ಬಿಎಫ್‌ಸಿ 2006 ದಿನಾಂಕ: 22-06-2007 ರ ಪ್ರಕಾರ ಸಾಲದ ಖಾತೆಯನ್ನು ಚುಕ್ತಾ ಮಾಡಿದ್ದಲ್ಲಿ ಅಂತಹ ಪ್ರಕರಣಗಳಿಗೆ ಈ ಯೋಜನೆಯು ಅನ್ವಯಿಸುವುದಿಲ್ಲ ಮತ್ತು ಈ ಯೋಜನೆಯು ದಿನಾಂಕ: 31.12.2009ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ.

5. ಪ್ರಕರಣ 2(ಅ) ಮತ್ತು (ಆ) ರಲ್ಲಿ ಸಾಲಗಾರರು ಈ ವಿಶೇಷ ಒಂದಾವರ್ತಿ ತೀರುವಳಿ ಯೋಜನೆಯಡಿಯಲ್ಲಿ ಪಾವತಿಸುವ ಹಣಕ್ಕೆ ಸಮನಾದ ಮೊತ್ತವನ್ನು ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ನೀಡುವುದು.

--4

670

6. ಈ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರವು ಭರಿಸುವ ಒಟ್ಟು ವೆಚ್ಚ ರೂ.36.00 ಕೋಟಿಗೆ ಸೀಮಿತವಾಗಿದ್ದು, ಈ ಹಣವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ರಾಜ್ಯ ಸರ್ಕಾರದ ಷೇರು ಬಂಡವಾಳದ ರೂಪದಲ್ಲಿ ನೀಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ.ಶಾಮರಾವ್) 26.8.2009
ಸರ್ಕಾರದ ಅಧೀನ ಕಾರ್ಯದರ್ಶಿ,
(ಆರ್ಥಿಕ ನಿಯಮಗಳು, ಆಯವ್ಯಯ
ಸಂಕಲನ ಮತ್ತು ಸಮಿತಿ ಶಾಖೆ)
ಆರ್ಥಿಕ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು (ಎ ಮತ್ತು ಇ), (ಬುಕ್-2), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಧಾನಸೌಧ, ಬೆಂಗಳೂರು
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು.
4) ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
5) ಖಜಾನೆ ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
6) ಉಪ ನಿರ್ದೇಶಕರು, ಖಜಾನೆ ಗಣಕಜಾಲ ಕೇಂದ್ರ, ಖನಿಜ ಭವನ, ಬೆಂಗಳೂರು.
7) ಆರ್ಥಿಕ ಇಲಾಖೆಯ ಎಲ್ಲಾ ಅಧೀನ ಕಾರ್ಯದರ್ಶಿಗಳು ಮತ್ತು ಶಾಖೆಗಳಿಗೆ.
8) ಶಾಖಾ ರಕ್ಷಾ ಕಡತ / ಕಛೇರಿ ಪ್ರತಿ.

ANNEXURE - II

KARNATAKA STATE FINANCIAL CORPORATION
BRANCH OFFICE :.............................

Sub : OTS proposal in respect of M/s / Sri / Smt..........................
under modified OTS package of GoK issued vide GO dt:29.09.2009.

~:o:O:o:~

| | | | | | | | |
|---|---|---|---|---|---|---|---|
| 1 | NAME OF THE UNIT / PARTY & ADDRESS | | | | | | |
| 2 | ACCOUNT NUMBER | | | | | | |
| 3 | CONSTITUTION PROPRIETARY /PARTNER-SHIP / COMPANY) | | | | | | |
| 4 | NAME OF THE PROMOTER/S | | | | | | |
| 5 | LOAN DETAILS | | Date of Sanction | Amount sanctioned | Amount disbursed | ROI | Remarks |
| | | | | | | | |
| 6 | PROMOTERS CLASS (SC / ST / BC / MC / GENERAL) | | | | | | |
| 7 | ACTIVITY / PRODUCT | | | | | | |
| 8 | TOTAL DEMAND AS ON ________: | | TERM LOAN | | SSC | | |
| | | | NORMAL | SI | NORMAL | SI | |
| | | Principal | | | | | |
| | | Interest | | | | | |
| | | Other debits | | | | | |
| | | TOTAL: | | | | | |
| 9 | REPAYMENT RECEIVED SO FAR: | | TERM LOAN | | SSC | | |
| | | | NORMAL | SI | NORMAL | SI | |
| | | Principal | | | | | |
| | | Interest | | | | | |
| | | Other debits | | | | | |
| | | TOTAL: | | | | | |
| 10 | PRESENT DUES POSITION AS ON :.......... | | TERM LOAN | | SSC | | |
| | | | NORMAL | SI | NORMAL | SI | |
| | | Principal | | | | | |
| | | Interest | | | | | |
| | | Other debits | | | | | |
| | | TOTAL: | | | | | |

| | | |
|---|---|---|
| 11 | ASSET CATEGORY AS ON 01.04.2006 | |
| 12 | AVAILABILITY OF SECURITY IN RESPECT OF LOANS ABOVE Rs.5.00 LAKHS AND LESS THAN Rs.10.00 LAKH CASES (ON SR VALUE BASIS):<br>PRIMARY<br>COLLATERAL | |
| 13 | OTS AMOUNT TO BE PAID BY THE BORROWER IN RESPECT OF TERM LOAN | |
| 14 | ELIGIBLE REIMBURSEMENT AMOUNT FROM GOK (EQUIVALENT TO THE OTS AMOUNT PAID BY THE BORROWER) | |
| 15 | ADDITIONAL INFORMATION:*<br>a) OTS Payment that was supposed to be made by the borrower as per the original OTS Scheme of GoK<br>b) Eligible reimbursement from GoK as per original OTS Scheme which is now being foregone due to the modification | |
| 16 | SSC AMOUNT TO BE PAID BY THE BOROWER ON SI BASIS (WITHOUT WRITE-OFF) | |
| 17 | AGENCY LOAN OUTSTANDING (to be settled by the party separately):<br>PRINCIPAL<br>INTEREST | |

* This additional Information is required to assess the impact of the modified GO on the interest recovery.

...3

18. CERTIFICATION / RECOMMENDATION :

It is hereby certified that the unit/account is eligible for extending the OTS under the modified OTS package of GoK. Hence it is recommended for extending the OTS for loans extended by KSFC subject to the payment of OTS amount of Rs. . . . . . . . . . . . . . by the borrower / guarantor with resultant sacrifice by way of write-off of Rs. . . . . . . . . . . , waiver of interest dues of Rs. . . . . . . . . . . . . . as on . . . . . . . . . . . .

Further, the party should settle the SSC dues of Rs. . . . . . . . . . . . . . on SI basis, with resultant sacrifice in the form of waiver of interest dues of Rs. . . . . . . . . . . . as on . . . . . .

**OFFICER INCHARGE OF RECOVERY**

**BRANCH MANAGER**

cc : DGM(C) / DGM (IA);

ANNEXURE-III

INFORMATION REQUIRED TO BE FILLED IN "GOK-MODIFIED" OTS DATA ENTRY FORM

(Amount in Rupees)

| | |
|---|---|
| Name of the Unit / Borrower | |
| Account Number (Six digits) | |
| Amount Disbursed | |
| Gross other debits | |
| Gross Simple Interest Demand | |
| Amount recovered so far | |
| Present outstanding:<br>a) Loan outstanding (Principal)<br>b) Interest dues<br>c) Other Debits | |
| Availability of security (in respect of above Rs.5.00 lakh and upto Rs.10.00 lakh cases):<br>a) Primary<br>b) Collateral | |
| OTS amount paid by the borrower | |
| Eligible Reimbursement amount from GoK | |
| Sacrificed amount:<br>a. Write-off<br>b. Waiver | |
| Payment supposed to be made by the borrower as per the original OTS scheme of GoK | |
| Eligible reimbursement foregone on account of modified OTS scheme of GoK | |